ಓ.ಎಸ್.ನಂ.**192/2016**
ಡಿಡಬ್ಲ್ಯೂ **.1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **30.01.2025**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎನ್.ಎಲ್. ವಕೀಲರಿಂದ**

ನನ್ನ ತಂದೆ ಓಬಯ್ಯ, ಅವರ ತಂದೆ ನರಸಿಂಹಯ್ಯ. ನರಸಿಂಹಯ್ಯನವರಿಗೆ ಓಬಯ್ಯ ಮತ್ತು ಶಾರದಮ್ಮ ಎಂಬ ಮಕ್ಕಳಿದ್ದಾರೆ. ನನ್ನ ಅಜ್ಜಿಯ ಹೆಸರು ನಂಜಮ್ಮ. ನನ್ನ ತಾತ ನರಸಿಂಹಯ್ಯನವರ ಮೂಲ ಊರು ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಕೋಳಾಳ ಹೋಬಳಿಯ ವೀರಸಾಗರ ಗ್ರಾಮ ಎಂದರೆ ಸರಿ. ನರಸಿಂಹಯ್ಯನವರ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿಗಳು ವೀರಸಾಗರ ಗ್ರಾಮದಲ್ಲಿ ಇದ್ದಾವೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ನನ್ನ ತಾತನವರು ಮನೆ ಅಳಿಯತನಕೆ ದೊಡ್ಡಬಳ್ಳಾಪುರ ತಾಲ್ಲೂಕಿನ ಹುಲಿಕುಂಟೆ ಗ್ರಾಮಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಆದರೆ ವೀರಸಾಗರದಲ್ಲಿರುವ ಆಸ್ತಿಗಳನ್ನು ಮಾರಾಟ ಮಾಡಿ ಹುಲಿಕುಂಟೆ ಗ್ರಾಮಕ್ಕೆ ಬಂದಿದ್ದರು. ಈ ರೀತಿ ಆಸ್ತಿಗಳನ್ನು ಮಾರಾಟ ಮಾಡಿ ಹುಲಿಕುಂಟೆಗೆ ಬಂದಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ.

ವಾದಿಯು **3**ನೇ ಒಂದು ಭಾಗ ಬರಬೇಕೆಂದು ಈ ದಾವೆಯನ್ನು ಹಾಕಿದ್ದಾರೆ ಎಂದರೆ ಸರಿ. ವಾದಿಗೆ ಕೊಟ್ಟಿರುವ ಭಾಗದ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ವಾದಿಗೆ ಭಾಗ ಕೊಟ್ಟಿದ್ದೇವೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ನಾವು ವಾದಿಗೆ ಯಾವುದೇ ಭಾಗ ಕೊಡದೇ ಇರುವ ಕಾರಣ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನರಸಿಂಹಯ್ಯನವರು ಕ್ರಯಕ್ಕೆ ಕೊಂಡಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯನ್ನು ಹೊರುತಪಡಿಸಿ ನರಸಿಂಹಯ್ಯನವರ ಹೆಸರಿನಲ್ಲಿ ಬೇರೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ

ಯಾವುದೇ ಜಮೀನು ಅಥವಾ ಖಾನೇಷುಮಾರಿ ಖಾತೆಯಲ್ಲಿ ಮನೆಯನ್ನು ಖರೀದಿಸಿಲ್ಲ ಎಂದರೆ ಸಾಕ್ಷಿಯು ಒಂದು ಮನೆಯನ್ನು ಖರೀದಿಸಿದ್ದಾರೆ ಅದನ್ನು ವಾದಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದು ಹೇಳುತ್ತಾರೆ. ನರಸಿಂಹಯ್ಯನವರು ಮನೆಯನ್ನು ಖರೀದಿಸಿದ್ದಾರೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿದ್ದೀರಾ ಎಂದರೆ ಇಲ್ಲ. ಸರ್ವೆ ನಂ.**45/3** ರ ಜಮೀನನ್ನು ನರಸಿಂಹಯ್ಯನವರು ಖರೀದಿ ಮಾಡಿದ್ದಾರೆಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನರಸಿಂಹಯ್ಯ ಮತ್ತು ಲಕ್ಷ್ಮೀನರಸಪ್ಪನವರು ಜಂಟಿಯಾಗಿ ಲಕ್ಷ್ಮೀನರಸಪ್ಪನವರ ಹೆಸರಿನಲ್ಲಿ ಖರೀದಿಸಿದ್ದಾರೆ ಎಂದು ಹೇಳುತ್ತಾರೆ. ಸದರಿ ಕ್ರಯಪತ್ರವನ್ನು ಮತ್ತು ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಯು ನಮಗೆ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದಿಂದ ಬಂದಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನರಸಿಂಹಯ್ಯನವರು ತಮ್ಮ ಜೀವಿತಾ ಕಾಲದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ವಿಲ್ ಅಥವಾ ದಾನಪತ್ರ ಮಾಡಿಲ್ಲ ಎಂದರೆ ಸರಿ. ನರಸಿಂಹಯ್ಯನವರಿಗೆ ಓಬಯ್ಯ ಮತ್ತು ಶಾರದಮ್ಮರವರುಗಳನ್ನು ಹೊರತುಪಡಿಸಿ ಬೇರೆ ಯಾರೇ ವಾರಸ್ಸುದಾರರಿರಲಿಲ್ಲ ಎಂದರೆ ಸಾಕ್ಷಿಯು ಅವರಿಗೆ ಇನ್ನೊಬ್ಬ ಮಗನಿದ್ದನು, ಮದುವೆಗೆ ಮೊದಲೇ ಚಿಕ್ಕವಯಸ್ಸಿನಲ್ಲೇ ಮೃತಪಟ್ಟಿದ್ದಾನೆ ಎಂದು ಹೇಳುತ್ತಾರೆ. ವಾದಿಯು ನರಸಿಂಹಯ್ಯನವರ ಎಲ್ಲಾ ವಂಶಸ್ಥರನ್ನು ಈ ದಾವೆಯಲ್ಲಿ ಸೇರಿಸಿದ್ದಾರೆ ಎಂದರೆ ಸರಿ. ನರಸಿಂಹಯ್ಯನವರಿಗೆ ಸಂಬಂಧಿಸಿದ ಎಲ್ಲಾ ಆಸ್ತಿಗಳನ್ನು ವಾದಿಯು ಈ ದಾವೆಯಲ್ಲಿ ಸೇರಿಸಿದ್ದಾರೆ ಎಂದರೆ ಸರಿಯಲ್ಲ.

ಡಿಡಬ್ಲ್ಯೂ – **2** ರ ತಂದೆಯ ಹೆಸರು ಲಕ್ಷ್ಮೀನರಸಪ್ಪ. ಲಕ್ಷ್ಮೀನರಸಪ್ಪನವರ ತಂಗಿಯಾದ ನಂಜಮ್ಮನೇ ನಮ್ಮ ಅಜ್ಜಿ ಎಂದರೆ ಸರಿ. ಡಿಡಬ್ಲ್ಯೂ – **2** ರವರು ತಮ್ಮ ಸಾಕ್ಷ್ಯದಲ್ಲಿ ಲಕ್ಷ್ಮೀನರಸಪ್ಪ ಮತ್ತು ನಂಜಮ್ಮನ ಹೆಸರಿನಲ್ಲಿ ಸರ್ವೆ ನಂ.**45/3** ರ ಜಂಟಿಯಾಗಿ ಖರೀದಿಸಿದ್ದಾರೆಂದು ಸಾಕ್ಷಿ ನುಡಿದಿದ್ದಾರೆ ಎಂದರೆ ಸರಿ. ಅದೇ ರೀತಿ

ಡಿಡಬ್ಲ್ಯೂ **–2** ರವರು ಹುಲಿಕುಂಟೆ ಗ್ರಾಮದಲ್ಲಿ ನಂಜಮ್ಮನವರಿಗೆ ಸೇರಿದ ಪಿತ್ರಾರ್ಜಿತವಾಗಿ ಬಂದ ಮನೆ ಇತ್ತು ಎಂದು ಸಾಕ್ಷಿ ನುಡಿದಿದ್ದಾರೆ ಎಂದರೆ ಸರಿ. ಆದರೆ ಅವರಿಗೆ ಆ ರೀತಿ ಬಂದಿಲ್ಲ. ಸದರಿ ಮನೆಯ ಜಾಗವನ್ನು ನನ್ನ ತಾತ ಖರೀದಿ ಮಾಡಿದ್ದರು. ಈ ಬಗ್ಗೆ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಸದರಿ ಸರ್ವೆ ನಂ.**45/3** ಮತ್ತು ಹಳೆಯ ಜಾಗವನ್ನು ಬಿಟ್ಟರೆ ನಂಜಮ್ಮನವರಿಗೆ ಬೇರೆ ಯಾವುದೇ ಆಸ್ತಿಗಳು ಬಂದಿಲ್ಲ ಎಂದರೆ ಸರಿ. ಸದರಿ ಹಳೆ ಮನೆಯ ಜಾಗದ ಖಾತೆ ನಂ.**157,** ಸ್ವತ್ತಿನ ಸಂಖ್ಯೆ:**229,** ಅದರ ವಿಸ್ತೀರ್ಣ ಪೂರ್ವ – ಪಶ್ಚಿಮ **–50** ಅಡಿಗಳು ಮತ್ತು ಉತ್ತರ – ದಕ್ಷಿಣ – **12** ಅಡಿಗಳು ಎಂದರೆ ಸರಿ. ಸದರಿ ಆಸ್ತಿಯನ್ನು ನಂಜಮ್ಮನವರು ದಿನಾಂಕ:**09.02.2009** ರಲ್ಲಿ ವಾದಿಗೆ ದಾನ ಮಾಡಿದ್ದಾರೆ ಎಂದರೆ ಸರಿ. ಆದರೆ ನಂಜಮ್ಮನವರಿಗೆ ದಾನ ಮಾಡಲು ಯಾವುದೇ ಹಕ್ಕು ಇರಲಿಲ್ಲ. ಸದರಿ ಆಸ್ತಿಯನ್ನು ನರಸಿಂಹಯ್ಯನವರು ಖರೀದಿ ಮಾಡಿದ್ದಾರೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನಂಜಮ್ಮನವರಿಗೆ **3**ನೇ ಒಂದು ಭಾಗದ ಹಕ್ಕು ಇದೆಯಾ ಎಂದರೆ ಇಲ್ಲ. ನರಸಿಂಹಯ್ಯನವರು ಮೃತಪಟ್ಟ ನಂತರ ಅವರಿಗೆ ಅವರ ಹೆಂಡತಿ ನಂಜಮ್ಮ, ವಾದಿ ಮತ್ತು ಹೋಬಳಯ್ಯ ವಾರಸ್ಸುದಾರರಾಗಿದ್ದರು ಎಂದರೆ ಸರಿ. ಅವರುಗಳನ್ನು ಹೊರತುಪಡಿಸಿ ಬೇರೆ ಯಾರೂ ನರಸಿಂಹಯ್ಯನವರಿಗೆ ವಾರಸ್ಸುದಾರರಿರಲಿಲ್ಲ ಎಂದರೆ ಸರಿ. ನಂಜಮ್ಮ ನವರು ಬದುಕಿದ್ದಾಗ ದಾವಾ ಆಸ್ತಿಯಲ್ಲಿ ಅವರ ಹಿಸ್ಸೆಯ ಆಸ್ತಿಯನ್ನು ಅವರು ಮೃತಪಟ್ಟ ನಂತರ ವಾದಿಗೆ ಹೋಗಬೇಕೆಂದು ದಿನಾಂಕ: **28.04.2016** ರಂದು ವಿಲ್ ಮಾಡಿದ್ದರು ಎಂದರೆ ಗೊತ್ತಿಲ್ಲ. ಸದರಿ ವಿಲ್ ನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ, ನ್ಯಾಯಾಲಯಕ್ಕೆ ವಿಲ್ ಹಾಜರುಪಡಿಸಿದ ನಂತರ ನನಗೆ ಅದರ ಬಗ್ಗೆ ಮಾಹಿತಿ ಬಂದಿರುತ್ತದೆ. ಸದರಿ ವಿಲ್ ನಲ್ಲಿ ನಂಜಮ್ಮನವರು ಶಾರದಮ್ಮ ಮತ್ತು ಓಬಳಯ್ಯನವರ ಮದುವೆ ಮಾಡಿ **2016** ರಲ್ಲಿ ಅವರ ಎಲ್ಲಾ ಜವಾಬ್ದಾರಿಯನ್ನು ಮುಗಿಸಿದ್ದಾರೆಂದು ಬರೆಸಿದ್ದಾರೆ ಎಂದರೆ ಸರಿ. ಸದರಿ ವಿಲ್ ನಲ್ಲಿ ವಾದಿಗೆ

ಬೋಜಪ್ಪನ ಮಗ ಗೋಪಾಲಯ್ಯನ ಜೊತೆ ವಿವಾಹ ಮಾಡಿಸಿದ್ದಾರೆಂದು ಹೇಳಿದ್ದಾರೆ ಎಂದರೆ ಸರಿ. ಅದೇ ರೀತಿ ನನ್ನ ಮಗ ಓಬಯ್ಯನಿಗೆ ವೆಂಕಟಶಾಮಯ್ಯನ ಮಗಳು ಶಾರದಮ್ಮನೊಂದಿಗೆ ಮದುವೆ ಮಾಡಿಸಿದ್ದೇನೆಂದು ಬರೆಸಿದ್ದಾರೆ ಎಂದರೆ ಸರಿ. ನನ್ನ ತಂದೆಯು ಮದುವೆಯಾದ **8** ವರ್ಷದ ನಂತರ ಜಾಂಡೀಸ್ ಖಾಯಿಲೆಯಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಆದರೆ ಅವರು ಚೆನ್ನಾಗಿದ್ದರು. ನನ್ನ ತಂ ಿಯ ಮದುವೆಯಾದ ಎಷ್ಟು ವರ್ಷದ ನಂತರ ಹುಟ್ಟಿದ್ದೇನೆ ಎಂದರೆ ಗೊತ್ತಿಲ್ಲ. ನಾನು ದಿನಾಂಕಃ**25.12.1989** ರಂದು ಜನಿಸಿರುತ್ತೇನೆ. ನನಗೆ ಚಿಕ್ಕ ವಯಸ್ಸಾಗಿದ್ದ ಕಾರಣ ಆ ಸಮಯದಲ್ಲಿ ನನ್ನ ತಂದೆಗೆ ಆರೋಗ್ಯ ಸರಿ ಇತ್ತಾ ಇಲ್ಲವಾ ಎಂದು ಗೊತ್ತಿರಲಿಲ್ಲ ಎಂದರೆ ಸರಿ.

**ಮುಂದುವರೆದ ವಾಟೀ ಸವಾಲುಃ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.